ಆದರೆ ಇದುವರೆಗೂ ಕೂಡ ಯಾರ ಯಾರ ಮೇಲೆ ಇವರು ಶಂಕೆ ವ್ಯಕ್ತ ಪಡಿಸಿ ಇವರೇ ಅಪಹರಣ ಮಾಡಿರುವುದು, ಇವರೇ ಕೊಲೆ ಮಾಡಿರುವುದು ಎಂದು ತಿಳಿಸಿದ್ದರೂ ಕೂಡ ಇದುವರೆಗೂ ಕೂಡ ಆ ಆರೋಪಿಗಳನ್ನು ಬಂಧನ ಮಾಡಿಲ್ಲ. ಬದಲಿಗೆ ಪೋಲೀಸರು ಆಮಿಷ ಕಾಲು ಜಾರಿ ಆ ಕೆರೆಯಲ್ಲಿ ಬಿದ್ದು ಸತ್ತಳು ಎಂದು ಕಥೆ ಹುಟ್ಟಿಸುತ್ತಿದ್ದಾರೆ. ಆ ಕೆರೆಯಲ್ಲಿ ನೀರಿರುವುದೇ ನಾಲ್ಕು ಅಡಿ. ನಾಲ್ಕು ಅಡಿ ನೀರಿರುವ ಕೆರೆಯಲ್ಲಿ ಜಾರಿ ಬಿದ್ದು ಸತ್ತಳು ಎಂದು ಕಥೆ ಹುಟ್ಟಿಸುತ್ತಿದ್ದಾರೆ. ಸನ್ಮಾನ್ಯ ಅಧ್ಯಕ್ಷರೆ, ಈ ಮನೆಯವರು ಹೋದಾಗ ಪೋಲೀಸ್ ಸ್ಟೇಷನ್‌ನಲ್ಲಿ ಹೇಳುತ್ತಾರೆ ಆಕೆಯ ಫೋಟೋ ತೆಗೆಸಿದ್ದೆವು ಎಂದು. ಆದರೆ ಆ ಫೋಟೋವನ್ನು ಇದುವರೆಗೂ ತೋರಿಸಿಲ್ಲ. ಅವರೇ ಪೋಸ್ಟ್‌ಮಾರ್ಟಂ ಮಾಡಿಸಿಬಿಟ್ಟಿದ್ದಾರೆ. ನಾನು ಈ ಸಂದರ್ಭದಲ್ಲಿ ಸರ್ಕಾರವನ್ನು ಆಗ್ರಹಿಸುವುದು ಪೋಲೀಸರು ಯಾವುದೇ ರೀತಿ ಆರೋಪಿಗಳ ಜೊತೆ ಸಾಮಿಲಾಗದೆ ಒಬ್ಬ ವಿಧವೆಯನ್ನು ಈ ರೀತಿ ಅಪಹರಣ ಮಾಡಿ ಕೊಲೆ ಮಾಡಿರುವ ಬಗ್ಗೆ ಕೂಡಲೇ ಕಾರ್ಯಪ್ರವೃತ್ತರಾಗಬೇಕು. ಆ ಆರೋಪಿಗಳನ್ನು ಬಂಧನ ಮಾಡಬೇಕು ಎಂದು ಈ ಸಂದರ್ಭದಲ್ಲಿ ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಸಭಾಧ್ಯಕ್ಷರೇ, ಇದರಲ್ಲಿ ಯಾವುದೇ ಸಂದರ್ಭದಲ್ಲಿ ಆರೋಪಿಗಳ ಜೊತೆಯಲ್ಲಿ ಸಾಮಿಲಾಗುವ ಪ್ರಶ್ನೆ ಇಲ್ಲ. ಅಧಿಕಾರಿಗಳು ಇಲ್ಲೇ ಇದ್ದಾರೆ. ಕೂಡಲೇ ಕಾರ್ಯತತ್ಪರರಾಗಿ ಅದರ ಬಗ್ಗೆ ಕ್ರಮ ಜರುಗಿಸುತ್ತಿದ್ದಾರೆ. ಕ್ರಮ ಏನನ್ನು ಕೈಗೊಂಡಿದ್ದಾರೆ ಎಂಬ ಬಗ್ಗೆ ಬಹುಶಃ ಇನ್ನು ಎರಡು ದಿವಸದಲ್ಲಿ ಮಾಹಿತಿಯನ್ನು ಇಲಾಖೆಯಿಂದ ತರಿಸಿಕೊಡುತ್ತಿದ್ದೇನೆ. ಇಷ್ಟು ಮಾತ್ರ ಹೇಳುತ್ತೇನೆ ಯಾರು ಈ ಆರೋಪಿಗಳಿದ್ದಾರೆ ನಡೆದಿರತಕ್ಕ ಘಟನೆ ಬಗ್ಗೆ ಕಾರ್ಯಕ್ರಮ ಮಾಡಿಸುತ್ತಿದ್ದೇವೆ. ಆರೋಪಿಗಳನ್ನು ಬಂಧಿಸಿ ಕ್ರಮ ಕೈಗೊಳ್ಳುವುದಕ್ಕೆ ಸರ್ಕಾರ ಹಿಂದೆ ಮುಂದೆ ನೋಡುವುದಿಲ್ಲ.

(ಎ) <u>ಹಿರೇಕೆರೂರು ತಾಲ್ಲೂಕಿನ ವಿದ್ಯುತ್ ಕೇಂದ್ರದ ಕುರಿತು</u>

ಶ್ರೀ ಯು. ಬಿ. ಬಣಕಾರ್ (ಹಿರೇಕೆರೂರು):- ಸನ್ಮಾನ್ಯ ಉಪಾಧ್ಯಕ್ಷರೆ, ಹಿಂದೆ ಅಧಿವೇಶನ ಆದ ಮೇಲೆ ಮರಳಿ ಊರಿಗೆ ಹೋದಾಗ ಹಿರೇಕೆರೂರು ತಾಲ್ಲೂಕಿನಲ್ಲಿ ರಟ್ಟನಹಳ್ಳಿ, ವಿದ್ಯುತ್ ಕೇಂದ್ರದ ಕೆಳಗೆ ಬರುವಂಥ ಅಣಜ್ಜಿ, ಗುಡ್ಡದಮಾದಾಪುರ, ನಾಗವಂದ, ತಡಕನಳ್ಳಿ, ಹಿರೇಕಬ್ಬಾರ, ಕಿರಿಗೇರಿ, ಹಲಿಯಾಳ, ಚಿಪ್ಪದಹಳ್ಳಿ, ಸಿರಿಗಂಧಿ, ಮಳಗಿ, ಕಡೂರು, ಹಾಗೂ ರಟ್ಟಹಳ್ಳಿ ನಾಗರಿಕರು ತಾವು ಕಳೆದ ಒಂದು ತಿಂಗಳಿಂದ ಅನುಭವಿಸಿರುವ ವಿದ್ಯುಚ್ಛಕ್ತಿ ತೊಂದರೆ ಬಗ್ಗೆ ತಿಳಿಸಿದರು. ಕಳೆದ ಸುಮಾರು 7 ತಿಂಗಳಿಂದ ಪೋಲೀಸರು ಆ ವಿದ್ಯುಚ್ಛಕ್ತಿ ಕೇಂದ್ರವನ್ನು ಕಾಯುವಂಥ ಕೆಲಸ ಮಾಡುತ್ತಿದ್ದಾರೆ. ಹರಿಹರದಿಂದ 8 ಎಂ.ವಿ. ನಿಂದ ಅಲ್ಲಿಗೆ ವಿದ್ಯುಚ್ಛಕ್ತಿ ಬರುತ್ತಿದೆ 8 ಎಂ.ವಿ. ಬದಲಿಗೆ 12.5 ಎಂ.ವಿ.ಗೆ ಬದಲಾವಣೆ ಮಾಡಿದರೆ ಪರಿಸ್ಥಿತಿ ಸುಧಾರಣೆ ಮಾಡಬಹುದು ಎಂದು ಅಲ್ಲಿನ ಸ್ಥಳೀಯ ಕೆ.ಇ.ಬಿ. ಅಧಿಕಾರಿಗಳು ಹೇಳುತ್ತಿದ್ದಾರೆ. ಆದ್ದರಿಂದ ಮಾನ್ಯ ಸಚಿವರು ವಿನಂತಿ ಮಾಡುವುದೇನೆಂದರೆ ಹರಿಹರದಲ್ಲಿರುವಂಥ 8 ಎಂ.ಲಕವಿ. ಟ್ರಾನ್ಸ್‌ಫಾರ್ಮರ್ ಬದಲು 12.5 ಎಂ.ವಿ. ಟ್ರಾನ್ಸ್‌ಫಾರ್ಮರ್ ಕೂರಿಸಿ ಸಮಸ್ಯೆಯನ್ನು ಹೋಗಲಾಡಿಸಬೇಕು.

ಶ್ರೀ ಶರಣಬಸಪ್ಪ ದರ್ಶನಾಪುರ (ವಿದ್ಯುತ್ ಖಾತೆ ರಾಜ್ಯ ಸಚಿವರು):- ಸನ್ಮಾನ್ಯ ಉಪಾಧ್ಯಕ್ಷರೆ, ಸನ್ಮಾನ್ಯ ಸದಸ್ಯರು ಹೇಳಿದ ಹಾಗೆ ಈಗಾಗಲೇ ಇವತ್ತು ಮುಂಜಾನೆ ಚೀಫ್ ಇಂಜಿನಿಯರ್ ಅವರ

ಜೊತೆ ಚರ್ಚೆ ಮಾಡಿದ್ದೇನೆ. ರಾಣಿಬೆನ್ನೂರಿನಲ್ಲಿ 110 ಎಂ.ವಿ. ಸ್ಟೇಷನ್ ಈಗಾಗಲೇ ಕಂಪ್ಲೀಟ್ ಆಗುತ್ತಿದೆ. ಅದನ್ನು ಆದಷ್ಟು ಬೇಗ ಮಾಡಿ ಈ ತಿಂಗಳ ಕೊನೆಯಲ್ಲಿ ಅಥವಾ ಏಪ್ರಿಲ್ ಮೊದಲ ವಾರದಲ್ಲಿ ರಾಣಿಬೆನ್ನೂರಿನಲ್ಲಿ ಸಬ್-ಸ್ಟೇಷನ್ ಕೆಲಸ ಮುಗಿದರೆ ಈ ಹಳ್ಳಿಗಳ ತೊಂದರೆ ಏನು ಹೇಳುತ್ತಿದ್ದಾರೆ ಆ ತೊಂದರೆ ನಿವಾರಣೆಯಾಗುತ್ತದೆ. ಇದರ ಜೊತೆಗೆ 8 ಎಂ.ವಿ. ಟ್ರಾನ್ಸ್‌ಫಾರ್ಮರ್ ಬದಲು 12.5 ಎಂ.ವಿ. ಅಡಿಷನಲ್ ಟ್ರಾನ್ಸ್‌ಫಾರ್ಮರ್ ಕೂರಿಸಬೇಕೆಂದು ಏನು ಹೇಳಿದ್ದಾರೆ ಅದರ ಬಗ್ಗೆ ಕೂಡ ಈಗಾಗಲೇ ಚೀಪ್ ಇಂಜಿನಿಯರ್ ಅವರಿಗೆ ಹೇಳಿದ್ದೇನೆ. ಈಗ ಇರತಕ್ಕಂಥ ರಾಣಿಬೆನ್ನೂರು ಸ್ಟೇಷನ್‌ನ್ನು ಆದಷ್ಟು ಬೇಗ ಚಾಲೂ ಮಾಡಿ ಇನ್ನೂ ಒಂದು ವಾರ ಅಥವಾ ಹತ್ತು-ಹನ್ನೆರಡು ದಿವಸಗಳಲ್ಲಿ ಈ ಕೆಲಸ ಮುಗಿಸಿದರೆ ಆ ಭಾಗದ ರೈತರಿಗೆ ಸಾಕಷ್ಟು ಅನುಕೂಲವಾಗುತ್ತದೆ ಎಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳುತ್ತೇನೆ.

(ಏ) <u>ಮಂಗಳೂರು ವಿಶ್ವವಿದ್ಯಾನಿಲಯ ಕುರಿತು</u>

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) :- ಮಾನ್ಯ ಉಪಾಧ್ಯಕ್ಷರೇ, ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟ ಹಾಗೆ ಡಾ: ಶಿವರಾಮ ಕಾರಂತರ ಅಧ್ಯಯನ ಪೀಠ ಇದೆ. ಇದಕ್ಕೆ ಪ್ರತಿ ವರ್ಷ ವಾರ್ಷಿಕವಾಗಿ 10 ಲಕ್ಷ ರೂಪಾಯಿಗಳ ಅನುದಾನವನ್ನು ಕೊಡಬೇಕಿತ್ತು. ಆದರೆ 1994-95, 95-96, 96-97 ರ ತನಕ ಐದು ಲಕ್ಷ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. ಸುಮಾರು ನಲ್ವತ್ತು ಲಕ್ಷ ರೂಪಾಯಿ ಬಿಡುಗಡೆ ಮಾಡಬೇಕಾಗಿರುವಲ್ಲಿ ಕೇವಲ ಐದು ಲಕ್ಷ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡಿರುವುದು ಒಂದು ರೀತಿಯಲ್ಲಿ ಅವಮಾನ ಮಾಡಿದ ಹಾಗೆ ಎಂದು ನಾನು ತಿಳಿದುಕೊಂಡಿದ್ದೇನೆ. ಬಹುಶ: ಇಷ್ಟು ಹಣ ಬಂದಿದ್ದರೆ ಸಾಕಷ್ಟು ಅಧ್ಯಯನ ಮತ್ತು ಸಂಶೋಧನೆ ಕೆಲಸಕ್ಕೆ ಅನುಕೂಲವಾಗುತ್ತಿತ್ತು. ಬರುವ ವರ್ಷಕ್ಕೆ 10 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಬೇಕೆಂದು ಸಹ ವಿನಂತಿಯನ್ನು ಈ ಸಂದರ್ಭದಲ್ಲಿ ಮಾಡುವುದಕ್ಕೆ ಇಚ್ಛೆ ಪಡುತ್ತೇನೆ.

ಶ್ರೀ ಎಂ.ಸಿ ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ) :- ಮಾನ್ಯ ಉಪಾಧ್ಯಕ್ಷರೆ, ಡಾ: ಶಿವರಾಮ ಕಾರಂತ್ ಅವರಿಗೆ ಸಂಬಂಧಪಟ್ಟ ಹಾಗೆ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಒಂದು ಪೀಠವನ್ನು ಸ್ಥಾಪನೆ ಮಾಡಬೇಕಾಗಿರತಕ್ಕಂಥಾದ್ದಕ್ಕೆ ಸರ್ಕಾರದಿಂದ ಹಣ ಬಿಡುಗಡೆ ಮಾಡಬೇಕಾಗಿರತಕ್ಕಂಥಾದ್ದು ಇದೆ. ಬಹುಶ: ಮೂರು ನಾಲ್ಕು ವರ್ಷಗಳಿಂದ ಹಣ ಬಿಡುಗಡೆ ಮಾಡಿಲ್ಲವೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಯೋಗೀಶಭಟ್ ಅವರಿಗೆ ನಾನು ಇಷ್ಟು ಹೇಳುತ್ತಿದ್ದೇನೆ. ಈ ಕೆಲಸವನ್ನು ನಾನು ಬಹಳ ಅವಶ್ಯಕವಾಗಿ ಮಾಡಲೇಬೇಕು. ಶಿವರಾಮ ಕಾರಂತರ ಅಧ್ಯಯನ ಪೀಠ ಆಗಲೇಬೇಕಾಗುತ್ತದೆ ಮತ್ತು ಅದಕ್ಕೆ ಕೊಡಬೇಕಾದಂಥ ಹಣವನ್ನೂ ಕೊಡಬೇಕು. ಮತ್ತು ಅವರ ಕೃತಿ, ಅಧ್ಯಯನ ಅವರ ಚಿಂತನೆ ಬಗ್ಗೆ ಬೇಕಾದಷ್ಟು ಅಲ್ಲಿ ಸಂಶೋಧನೆ ಆಗಬೇಕೆಂಬುದರ ಬಗ್ಗೆ ಸರ್ಕಾರ ತಾತ್ವಿಕವಾಗಿ ಅದನ್ನು ಒಪ್ಪಿದೆ. ಈ ಹಿನ್ನೆಲೆಯಲ್ಲಿ ಇದಕ್ಕೆ ಸಂಬಂದಪಟ್ಟಂತೆ ಕಾರ್ಯಕ್ರಮವನ್ನು ಸರ್ಕಾರದ ವತಿಯಿಂದ ಮಾಡುತ್ತೇವೆ.